**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 46/2018**

ಸಿ.ಡಬ್ಲ್ಯೂ -01
ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಪ್ರದೀಪ್.
ತಂದೆಯ ಹೆಸರು :- ಗಂಗಬೋರೇಗೌಡ
ವಯಸ್ಸು :- 33 ವರ್ಷ
ಉದ್ಯೋಗ :- ಖಾಸಗಿ ಕೆಲಸ
ವಾಸ :- ಕೆ. ಬ್ಯಾಡರಹಳ್ಳಿ

**ಸಾಕ್ಷಿಗೆ ದಿಃ 18.06.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಆರೋಪಿತರು ನನಗೆ ಪರಿಚಯ. ಚಾ. ಸಾ. 1 ನನಗೆ ಪರಿಚಯ. ನ ದಿಃ 05.08.2021 ರಂದು ಸಂಜೆ 5 ರ ಸಮಯದಲ್ಲಿ ನಾನು ಮತ್ತು ಚಾ.ಸಾ. 3 ನಮ್ಮ ಜಮೀನ ಕಡೆ ಹೋಗುತ್ತಿದ್ದು ಆಗ ಚಾ.ಸಾ. 1 ಅವರ ಹಿಪ್ಪಯನೆರಳೆ ಗಿಡದ ಜಮೀನ ಹತ್ತಿರ ಗಲಾಟೆ ಶಬ್ದ ಕೇಳಿ ನಾವು ಹೋಗಿ ನೋಡಲಾಗಿ ಆರೋಪಿತರು ಚಾ.ಸಾ. 1 ಅವರಿಗೆ ಹೊಡೆಯುತ್ತಿದ್ದರು. ಆರೋಪಿ 1 ಕೋಲದಿಂದ ಬಲ ಭಾಗದ ಬುಜಕ್ಕೆ ಹೊಡೆದಿದ್ದು ಮತ್ತು ಕೈಯಿಂದ ಬಲಗಿವಿಯ ಮೇಲೆ ಹೊಡೆದಿರುತ್ತಾರೆ. ಜಮೀನು ವಿಚಾರಕ್ಕೆ ಅವರು ಗಲಾಟೆ ಮಾಡುತ್ತಿದ್ದರು. ನಾವು ಜಗಳ ಬಿಡಿಸಿರುತ್ತೆವೆ. ಅವಾಚ್ಯ ಶಬ್ದಗಳಿಂದ ಚಾ.ಸಾ. 1 ಅವರನ್ನು ಬೈದಿರುತ್ತಾರೆ ಮತ್ತು ಕೊಲೆ ಬೆದರಿಕೆ ಹಾಕಿರುತ್ತಾರೆ. ನಾನು ಪೊಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಚಾ.ಸಾ. 1 ಅವರಿಗೆ ಹೊಡೆಯಲು ಉಪಯೋಗಿದ ದೊಣ್ಣೆಯನ್ನು ನಾನು ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರಃ ವಾಯ್.ಆರ್.ಹೆಚ್. ವಕೀಲರಿಂದಃ**

ನಾನು ಡಿಗ್ರಿ ಓದಿರುತ್ತೇನೆ. ಊರಿನಲ್ಲಿ ಗಲಾಟೆ ಆದಾಗ 112 ಗೆ ಕರೆ ಮಾಡಬೇಕೆಂಬ ಸಾಮಾನ್ಯ ಜ್ಞಾನ ನನಗೆ ಗೊತ್ತು. ಈ ಗಲಾಟೆ ವಿಚಾರವಾಗಿ ನಾನು 112 ಗೆ ಕರೆ ಮಾಡಿರುವುದಿಲ್ಲ. ನಾನು ವ್ಯವಸಾಯ ಮತ್ತು ವುಡ್ ವ್ಯಾಪಾರ ಕೂಡ ಮಾಡುತ್ತೇನೆ. ಗಲಾಟೆ

ಗುರುವಾರದಂದು ಆಗಿರಬಹುದು. ಗಲಾಟೆ ಆದ ಜಮೀನು ಚಾ.ಸಾ. 1 ಅವರಿಗೆ ಸೇರಿದ್ದು ಅದರ ಸರ್ವೆ ನಂ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ಸದರಿ ಜಮೀನಿನ ದಾಖಲೆಯನ್ನು ನೋಡಿಲ್ಲ. ನಮ್ಮ ಮನೆಯ ಉತ್ತರ ದಿಕ್ಕಿಗೆ ಗಲಾಟೆ ಆದ ಜಾಗ ಬರುತ್ತದೆ. ಗಲಾಟೆ ಆದ ಜಾಗಕ್ಕೂ 300 -400 ಮೀಟರ್ ಅಂತರ ಇರುತ್ತದೆ. ನಮ್ಮ ಮನೆಯಿಂದ ನಮ್ಮ ಜಮೀನಿಗೆ 800 ಮೀಟರ್ ಅಂತರ ಇರಬಹುದು.

ಗಲಾಟೆ ಆದ ಜಮೀನಿಗೆ ಹೊಂದಿಕೊಂಡ ರಸ್ತೆ ಇದೆ. ಸದರಿ ಜಮೀನಿನ ಪೂರ್ವಕ್ಕೆ ರಸ್ತೆ ಇದೆ. ಚಾ.ಸಾ. 1 ಅವರ ಮಗ ಸತೀಶ್ ಅವರೊಂದಿಗೆ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತೀರಿ ಎಂದರೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ನ್ಯಾಯಾಲಯದಿಂದ ನನಗೆ ಸಮಸ್ಸ್ ಬಂದಿರುವುದಿಲ್ಲ. ಹಿಪ್ಪೆನೆರಳೆ ಮರ ಮತ್ತು ತೆಂಗಿನಮರ ಸದರಿ ಜಮೀನನಲ್ಲಿ ಇರುತ್ತದೆ. ಸದರಿ ಜಮೀನಿನ ಪಶ್ಚಿಮಕ್ಕೆ ಸರಕಾರಿ ಜಮೀನು ಪೂರ್ವಕ್ಕೆ ಶಿವಮೂರ್ತಿಯವರ ಜಮೀನು ದಕ್ಷಿಣಕ್ಕೆ ಮಂಜಯ್ಯ ಅವರ ಜಮೀನು ಉತ್ತರಕ್ಕೆ ಸಿತಮ್ಮಾ ಅವರು ಜಮೀನು ಇರುತ್ತದೆ. ಈ ಮೇಲೆ ಹೇಳಿಕ ಚಕ್ಕುಬಂದಿಯ ಜಮೀನಿನಲ್ಲಿ ಆರೋಪಿ 1 ಮತ್ತು ಶಂಕರ ಅವರ ಜಮೀನು ಇದೆ. ಯಾವ ಯಾವ ವಿಸ್ತೀರ್ಣದಲ್ಲಿ ಯಾರು ಯಾರು ಅನುಭವದಲ್ಲಿ ಇದ್ದಾರೆ ನನಗೆ ಗೊತ್ತಿಲ್ಲ. ಘಟನೆಯಾದ ಜಾಗ ಚಾ.ಸಾ. 1 ಅವರ ಅನುಭವದಲ್ಲಿದ್ದು ಅದರ ವಿಸ್ತೀರ್ಣ ನನಗೆ ಗೊತ್ತಿಲ್ಲ. ಹಿಪ್ಪೆನೆರಳೆ ಗಿಡದ ಜಮೀನು ನೀರಾವರಿ ಆಶ್ರಿತ ಜಮೀನು ಆಗಿರುತ್ತದೆ. ಹಿಪ್ಪೆನೆರಳೆ ಪೂರ್ಮ ಆಗಿರುತ್ತದೆ. ಹಿಪ್ಪೆನೆರಳೆ ಬೆಳೆ ಇತ್ತು.

ಆಗಿದೆ ಎನ್ನುವ ಘಟನೆ ಮೇಲೆ ಹೇಳಿದ ಚಕ್ಕುಬಂದಿಯ ಯಾವ ದಿಕ್ಕಿನಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ ಪೂರ್ವ ಮತ್ತು ದಕ್ಷಿಣದ ಮೂಲೆಯಲ್ಲಿ ಆಗಿರುತ್ತದೆ ಎಂದು ಹೇಳುತ್ತಾರೆ. ದೂರನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ದೂರಿನಲ್ಲಿ ನಾನು ಸ್ಥಳದಲ್ಲಿ ಹಾಜರಿದ್ದ ಬಗ್ಗೆ ಬರೆದ ವಿಚಾರ ನನಗೆ ಹೇಳಿರುತ್ತಾರೆ. ಘಟನೆ ಆದ ದಿನವೇ ದೂರನ್ನು ನೀಡಿದ್ದಾರಾ ಹೇಗೆ ಎಂದು ವಿಚಾರ ಮಾಡಿಲ್ಲ. ದಿಃ 09.09.2021 ರಂದು ಸಮಯ 11 ಗಂಟೆಯದಲ್ಲಿಪೊಸಲಿಸರು ಪೋನ್ ಮಾಡಿರುತ್ತಾರೆ. ಆ ದಿನ ನಾನು ಊರಿನಲ್ಲಿದ್ದೆ. ನಾನು ಪೊಲಿಸರಿಗೆ ಘಟನಾ ಸ್ಥಳ ತೋರಿಸಿರುವುದಿಲ್ಲ. ಪೋಲಿಸರು ಗಲಾಟೆ ಎಲ್ಲಿ ಆಯಿತು ಎಂದು ನನಗೆ ಕೇಳಿರುತ್ತಾರೆ. ನಾನು ಯಾವುದೇ ಘಟನೆ ನೋಡಿಲ್ಲ, ಸತೀಶ್ ನನ್ನ ಸ್ನೇಹಿತ ಆಗಿರುವ ಕಾರಣ ಮತ್ತು ಪೊಲಿಸ ಪೇದೆ ಇದ್ದು ಅವರು ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಮುಂದೆ ಇರುವ ದೊಣ್ಣೆ ಯಾವ ಜಾತಿಯದೆಂದು ನನಗೆ ಗೊತ್ತಿಲ್ಲ. ಘಟನೆಯ ನಂತರ ದೊಣ್ಣೆಯನ್ನು ಯಾರು ತಂದಿದ್ದರು ಯಾರೂ ತೆಗೆದುಕೊಂಡು ಹೋದರು

ಎಂದು ನನಗೆ ಗೊತ್ತಿಲ್ಲ. ಘಟನೆ ಆದ ದಿನ ಚಾ.ಸಾ. 1 ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲವೆಂದು ಹೇಳುತ್ತಾರೆ. ಘಟನೆ ಆದ ದಿನ ಆರೋಪಿತರು ಯಾವ ಬಣ್ಣದ ಬಟ್ಟೆ ಹಾಕಿದ್ದರು ಎಂದು ನನಗೆ ನೆನಪಿಲ್ಲ. ಕಾರಣ ಘಟನೆ ಆಗಿ 2 ವರ್ಷಗಳಾಗಿರುತ್ತದೆ. ಆರೋಪಿತರು ಸುಳೆ ಮುಂಡ ಲೋಪರ್ ಮುಂಡೆ ಎಂದು ಬೈಯುತ್ತಿದ್ದರು. ಗಲಾಟೆ ಆಗಿದೆ ಎನ್ನುವ ಜಾಗ ಹಿಪ್ಪೆನೆರಳೆ ಗಿಡದ ಜಾಗವಾಗಿರುತ್ತದೆ. ಚಾ.ಸಾ. 1 ಅವರ ಕುಟುಂದಲ್ಲಿ ವಿಭಾಗ ಆಗಿರುತ್ತಾರೆ. ಆಸ್ತಿ ನಮಗೆ ಬರಬೇಕೆಂದು ಗಲಾಟೆ ಮಾಡುತ್ತಿದ್ದರು. ನಾನು ಹೇಳುವ ದಿನಾಂಕದಂದು ನಾನು ಊರಲ್ಲಿ ಇರಲಿಲ್ಲ ಗಲಾಟೆ ಆದ ಜಾಗ ಸಹ ಗೊತ್ತಿಲ್ಲವೆಂದರೆ ಸರಿಯಲ್ಲ. ಚಾ.ಸಾ. 1 ಕೂಗಿಕೊಂಡಿದ್ದು ನಾನು ಹೋಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೊಣ್ಣೆಯನ್ನುಸಹ ನಾನು ನೋಡಿಲ್ಲ ಇದೇ ದಿನ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ. 1 ಅವರ ಮಗ ಪೋಲಿಸರ ಇಲಾಖೆಯಲ್ಲಿದ್ದು ನನ್ನ ಸ್ನೇಹಿತ ಆಗಿರುವ ಕಾರಣ ನಾನು ಈ ದಿನ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ಜಮೀನು ಸರ್ವೆ ನಂ ಗೆ ಹೋಗುತ್ತಿದ್ದೆ ಎಂದು ಹೇಳಿಕೆ ನೀಡಿಲ್ಲ. ನಾನು ಹೇಳುವ ರೀತಿ ನಮ್ಮ ಮನೆಯ ಉತ್ತರ ದಿಕ್ಕಿಗೆ ಚಾ.ಸಾ. 1 ಅವರ ಜಮೀನು ಬುರುವುದಿಲ್ಲ ಮತ್ತು ನಮ್ಮ ಜಮೀನು ಸಹ ಇರುವುದಿಲ್ಲವೆಂದರೆ ಸರಿಯಲ್ಲ. ನನಗೆ ಸತ್ಯಾ ಸತ್ಯಾತೆ ಗೊತ್ತಿಲ್ಲದಿದ್ದರೂ ಸಹ ಚಾ.ಸಾ. 1 ಅವರ ಮಗನ ಮಾತು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**